63

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿ ರವರ**
**ನಿಯಮ 72ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

**ಪ್ರಶ್ನೆ:** **ಹೆಬ್ಬಾಳ ಫ್ಲೈ ಓವರ್ ಕೆಳಗಡೆ "ಮಂಗಳಮುಖಿಯರ" ಕಾಟ ಹೆಚ್ಚಾಗಿದ್ದು, ಇದರಿಂದ ಯುವಜನತೆ ಮೇಲೆ ಗಂಭೀರವಾದ ಪರಿಣಾಮ ಬೀರುತ್ತಿದ್ದರೂ, ಇಲ್ಲಿ ಸಂಚರಿಸುವ ನಾಗರೀಕ ಕುಟುಂಬಗಳಿಗೆ ಹಾಗೂ ಸಾರ್ವಜನಿಕರು ಅಸಹ್ಯ ಪಡುವ ರೀತಿಯಲ್ಲಿ ಅಸಹ್ಯಕರ ಚಟುವಟಿಕೆಗಳಲ್ಲಿ ತೊಡಗಿರುವಂತಹ ವ್ಯಕ್ತಿಗಳು ವರ್ತನೆ ಮಾಡುತ್ತಿದ್ದು, ಇದನ್ನು ತಡೆಯಲು ವಿಫಲವಾಗಿರುವ ವ್ಯವಸ್ಥೆಯ ಕುರಿತು.**

**ಉತ್ತರ:** ಹೆಬ್ಬಾಳ ಫ್ಲೈ ಓವರ್ ಕೆಳಗಡೆ ಅಸಹ್ಯಕರ ಚಟುವಟಿಕೆಗಳಲ್ಲಿ ತೊಡಗಿರುವಂತಹ ವ್ಯಕ್ತಿಗಳ ವಿರುದ್ಧ ಈ ಕೆಳಕಂಡಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಪ್ರತಿದಿನ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ ಸದರಿ ಸ್ಥಳದಲ್ಲಿ ಪಾಯಿಂಟ್ ಕರ್ತವ್ಯವನ್ನು ಹಂಚಿಕೆ ಮಾಡಿದ್ದು ಪಿ.ಎಸ್.ಐ ಹಾಗೂ ಸಿಬ್ಬಂದಿಯವರನ್ನು ನೇಮಿಸಲಾಗಿದೆ.
2. 24 ಗಂಟೆಯೂ ಹೊಯ್ಸಳ & ಚೀತಾ ಸಿಬ್ಬಂದಿಯವರಿಗೆ ಆ ಪ್ರದೇಶದಲ್ಲಿ ಗಸ್ತು ಮಾಡಿ ಸಾರ್ವಜನಿಕರಿಗೆ ತೊಂದರೆಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.
3. ವಿಭಾಗ ವ್ಯಾಪ್ತಿಯಲ್ಲಿ "ಸಾರ್ವಜನಿಕ ಸುರಕ್ಷಾ ದಳ" ವನ್ನು ರಚಿಸಲಾಗಿದ್ದು, ಇದರ ಮುಖ್ಯಸ್ಥರನ್ನಾಗಿ ಮಹಿಳಾ ಪಿ.ಎಸ್.ಐ ರವರನ್ನು ನೇಮಿಸಲಾಗಿದೆ.
4. ಸದರಿ ಪ್ರದೇಶವು ಮಿನಿ ಅರಣ್ಯ ಪ್ರದೇಶವನ್ನು ಒಳಗೊಂಡಿದ್ದು, ಹೈ ಮಾಸ್ಕ್ ಲೈಟ್, ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಬಿ.ಬಿ.ಎಂ.ಪಿ.ಗೆ ಕೋರಲಾಗಿದೆ.
5. ಯಾರೂ ಸಹ ಸದರಿ ಮಿನಿ ಅರಣ್ಯ ಪ್ರದೇಶದಲ್ಲಿ ಒಳಗೆ ಹೋಗದಂತೆ ಸುರಕ್ಷಾ ಬೇಲಿಯನ್ನು ಅಳವಡಿಸಲು ಬಿ.ಬಿ.ಎಂ.ಪಿ. ರವರನ್ನು ಕೋರಲಾಗಿದೆ.
6. ಸಾರ್ವಜನಿಕರಿಗೆ ತೊಂದರೆಯನ್ನು ತಡೆಗಟ್ಟಲು ಫ್ಲೈ ಓವರ್ ಕೆಳಗೆ ಪೊಲೀಸ್ ಚೌಕಿಯನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

---

ನಂ. ಹೆಚ್‌ಡಿ 114 ಎಸ್‌ಎಸ್‌ಟಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು